ಇ) ಈ ಘಟಕಗಳಿಗೆ ಭೇಟಿ ನೀಡಿ ಪರಿವೀಕ್ಷಣೆ ಮಾಡಿ, ಔಷಧಿಗಳ ಗುಣಮಟ್ಟವನ್ನು ಅಧ್ಯಯನ ಮಾಡಿ ಕ್ರಮ ಕೈಗೊಳ್ಳಲು ಔಷಧ ಪರಿವೀಕ್ಷಕರ ಹುದ್ದೆ ಮಂಜೂರಾಗಿದ್ದರೂ ಸಹ ಇನ್ನು ಭರ್ತಿ ಮಾಡದೇ ಇರಲು ಕಾರಣಗಳೇನು ;

ಈ) ಈ ಹುದ್ದೆಯನ್ನು ಕೂಡಲೇ ಭರ್ತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀಮತಿ ನಫೀಸಾ ಫಜಲ್ (ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು)

ಅ) 11 (ಹನ್ನೊಂದು)

ಆ) ಹೌದು.

ಇ) ಸರ್ಕಾರಿ ಆದೇಶ ಸಂಖ್ಯೆ : ಆಕುಕ 240 ಪಿಐಎಂ 98, ದಿನಾಂಕ 2-12-1998 ರಲ್ಲಿ ಔಷಧ ಪರಿವೀಕ್ಷಕರು (ಹೋಮಿಯೋಪತಿ) ಒಂದು ಹುದ್ದೆಯನ್ನು ಸೃಷ್ಟಿಸಲಾಗಿರುತ್ತದೆ. ಹಾಲಿ ಇರುವ ವೃಂದ ಮತ್ತು ನೇಮಕಾತಿ ನಿಮಯಗಳಲ್ಲಿ ಈ ಹುದ್ದೆಯನ್ನು ಭರ್ತಿ ಮಾಡಲು ನೇಮಕಾತಿ ನಿಯಮ ಇರುವುದಿಲ್ಲ. ಈ ಹುದ್ದೆಯನ್ನು ಔಷಧ ನಿಯಂತ್ರಣ ಇಲಾಖೆಯಿಂದ ನಿಯೋಜನೆ ಮೇಲೆ ಭರ್ತಿ ಮಾಡಲು ಯಾರೂ ಲಭ್ಯವಿರುವುದಿಲ್ಲ. ಆದ್ದರಿಂದ ಸದರಿ ಹುದ್ದೆಗೆ ನೇಮಕಾತಿ ನಿಯಮವನ್ನು ನಿಗದಿಪಡಿಸಲು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಬೆಂಗಳೂರು ನಗರದಲ್ಲಿ ಇಸ್ಕಾನ್ ಸಂಸ್ಥೆಯ ನೆರವಿನಿಂದ ಶಾಲಾ ಮಕ್ಕಳಿಗೆ ಮಧ್ಯಾಹ್ನ ಉಪಹಾರ ಯೋಜನೆ

269 (77) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) - ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಒಂದರಿಂದ ಐದನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಮಕ್ಕಳ ಸಂಖ್ಯೆ ಎಷ್ಟು ;

ಆ) ಇವರ ಪೈಕಿ ಎಷ್ಟು ಮಕ್ಕಳಿಗೆ ಸರ್ಕಾರದಿಂದ ಮಧ್ಯಾಹ್ನದ ಉಪಹಾರ ಯೋಜನೆಯನ್ನು ಜಾರಿಗೆ ತರಲಾಗಿದೆ ;

ಇ) ಇಸ್ಕಾನ್ ಸಂಸ್ಥೆಯ ನೆರವಿನಿಂದ ಬೆಂಗಳೂರು ನಗರದಲ್ಲಿ ಎಷ್ಟು ಮಕ್ಕಳಿಗೆ ಮಧ್ಯಾಹ್ನದ ಉಪಹಾರ ನೀಡಲಾಗುತ್ತಿದೆ ;

ಈ) ಇಸ್ಕಾನ್ ಸಂಸ್ಥೆಗೆ ಒಂದು ಉಪಹಾರಕ್ಕೆ ತಗಲುವ ಖರ್ಚೆಷ್ಟು ಹಾಗೂ ಸರ್ಕಾರದಿಂದ ಸದರಿ ಸಂಸ್ಥೆಯ ಕೇಳಿರುವ ಹಣಕಾಸಿನ ನೆರವೆಷ್ಟು?

ಉ) ಇಸ್ಕಾನ್ ಸಂಸ್ಥೆ ಬೆಂಗಳೂರು ನಗರ ಜಿಲ್ಲೆಗೂ ಈ ಮಧ್ಯಾಹ್ನದ ಉಪಹಾರ ಯೋಜನೆಯನ್ನು ವಿಸ್ತರಿಸಲು ನಿರ್ಧರಿಸಿದೆಯೇ ;

ಊ) ಇದರಿಂದ ಎಷ್ಟು ಮಕ್ಕಳಿಗೆ ಈ ಮಧ್ಯಾಹ್ನದ ಉಪಹಾರ ದೊರಕಲು ಸಾಧ್ಯವಾಗುತ್ತದೆ?

ಪ್ರೊ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) 1,75,561

ಅ) ಯಾರಿಗೂ ಇಲ್ಲ

15736 ಮಕ್ಕಳಿಗೆ

ಇ) ಒಂದು ಮಗುವಿಗೆ ಒಂದು ದಿನಕ್ಕೆ 6 ರೂ.ಗಳನ್ನು ಖರ್ಚು ಮಾಡುತ್ತಿದೆ.

ಒಂದು ಮಗುವಿಗೆ ಒಂದು ದಿನಕ್ಕೆ 3 ರೂ.ಗಳನ್ನು ಸರ್ಕಾರದಿಂದ ಕೇಳುತ್ತಿದೆ.

ಉ) ಹೌದು.

ಊ) 1,00,000 ಮಕ್ಕಳು.

ಆಯುರ್ವೇದ ಹಾಗೂ ಹೋಮಿಯೋಪತಿ ನಕಲಿ ವೈದ್ಯರುಗಳ ಬಗ್ಗೆ

270 (79) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) - ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪದವಿ ಪಡೆದು ನೋಂದಾವಣೆಗೊಂಡ ಆಯುರ್ವೇದ ಹಾಗೂ ಹೋಮಿಯೋಪತಿ ವೈದ್ಯರುಗಳ ಸಂಖ್ಯೆ ಎಷ್ಟು ;

ಆ) ಪದವಿಯನ್ನು ಪಡೆಯದೆ, ನೋಂದಾವಣೆಯಾಗದೇ ಆಯುರ್ವೇದ ಹಾಗೂ ಹೋಮಿಯೋಪತಿ ವೈದ್ಯ ಚಿಕಿತ್ಸೆ ನೀಡುತ್ತಿರುವ ನಕಲಿ ವೈದ್ಯರುಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಇಂತಹ ನಕಲಿ ವೈದ್ಯರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ನಫೀಸ ಫಜಲ್ (ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು)

ಅ) ರಾಜ್ಯದಲ್ಲಿ ಪದವಿ ಪಡೆದು ನೋಂದಾವಣೆಗೊಂಡ ಆಯುರ್ವೇದ ಮತ್ತು ಹೋಮಿಯೋಪತಿ ವೈದ್ಯರುಗಳ ಸಂಖ್ಯೆ ಈ ಕೆಳಕಂಡಂತಿದೆ.

ಆಯುರ್ವೇದ	: 9275
ಹೋಮಿಯೋಪತಿ	: 3514

ಆ) ಬಂದಿದೆ.

ಇ) ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯಕೀಯ ವೃತ್ತಿದಾರರ ಅಧಿನಿಯಮ 1961ರ ಕಲಂ 34ರ ಪ್ರಕಾರ ವೈದ್ಯ ಪದ್ಧತಿಗಳ ವೈದ್ಯಕೀಯ ನೋಂದಣಿ ಅಥವಾ ಇತರ ಸಂಬಂಧಿತ ನೋಂದಣಿ ಕಾಯಿದೆ ಹೊಂದದೆ ಯಾವುದೇ ವ್ಯಕ್ತಿಯು ವೈದ್ಯಕೀಯ ವೃತ್ತಿ ನಡೆಸುವುದನ್ನು ಅಪರಾಧ ಎಂಬುದಾಗಿ ಪರಿಗಣಿಸಿದೆ. ಇಂತಹ ಅಪರಾಧಗಳನ್ನು ಎಸಗುವ ನಕಲಿ ವೈದ್ಯರುಗಳ ವಿರುದ್ಧ ಕಾನೂನು ಕ್ರಮ ಜರುಗಿಸಲು ಮೇಲ್ಕಂಡ ಅಧಿನಿಯಮದ ಕಲಂ 40(2)ರ ಪ್ರಕಾರ ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯ ಮಂಡಳಿಯ ರಿಜಿಸ್ಟ್ರಾರ್‌ರವರಿಗೆ ಅಧಿಕಾರವನ್ನು ಸರ್ಕಾರವು ನೀಡಿದೆ. ಆದರಂತೆ ರಿಜಿಸ್ಟ್ರಾರ್‌ರವರು ನೋಂದಣಿ ಮಾಡದೆ ಇರುವ ನಕಲಿ ವೈದ್ಯರುಗಳ ಮೇಲೆ ಕ್ರಮ ಜರುಗಿಸಲು ಅಧಿಕಾರ ಉಳ್ಳವರಾಗಿರುತ್ತಾರೆ. ಜೊತೆಗೆ ಸರ್ಕಾರವು ದಿನಾಂಕ 28.11.2001 ರಂದು ಸುತ್ತೋಲೆ ಹೊರಡಿಸಿ ನಕಲಿ ವೈದ್ಯರನ್ನು ಗುರುತಿಸುವ ವಿಧಾನವನ್ನು ತಿಳಿಸಿ ಈ ಸುತ್ತೋಲೆಯನ್ನು ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು,